ಮತ್ತೊಂದಿಷ್ಟು ಓದಿಕೊಂಡೆ. ತಿಳಿದಷ್ಟು ಕಲಿತಷ್ಟು ಈ ರಾಬಿನ್ ಹಕ್ಕಿಯ ಮೇಲೆ ಪ್ರೀತಿ ಹೆಚ್ಚಾಗುತ್ತಲೇ ಹೋಯಿತು.

ಸುಮಾರು ಎರಡು ಮಿಲಿಯನ್ ವರ್ಷಗಳಷ್ಟು ಹಳೆಯ ಪಳೆಯುಳಿಕೆಗಳಲ್ಲಿ ರಾಬಿನ್ ಹಕ್ಕಿಯನ್ನೂ ತಜ್ಞರು ಗುರುತಿಸಿದ್ದಾರೆ. ಭೂಮಿಗೆ ಮಾನವರಿಗಿಂತ ಮೊದಲೇ ಬಂದ ಜೀವವಿದು. ಈ ಹಕ್ಕಿಗಳ ಮೂಲ ಯೂರೋಪ್ ಆದರೂ, ಕಾಲಕ್ರಮೇಣ ಆಫ್ರಿಕಾ ಮತ್ತು ಏಷ್ಯಾದ ಕೆಲ ದೇಶಗಳಲ್ಲೂ ಇವು ಕಾಣಿಸತೊಡಗಿದವು. ಆದಾಗ್ಯೂ ಇದನ್ನು ಕರೆಯುವುದು ಮಾತ್ರ 'ಯೂರೋಪಿಯನ್ ರಾಬಿನ್' ಎಂದು.

ಮೊದಲೆಲ್ಲ ಈ ಪುಟ್ಟ ಜೀವಗಳು ದಟ್ಟ ಅರಣ್ಯ, ನದಿ ಬದುವಿನ ಕಾಡುಗಳಲ್ಲಿ ತಮ್ಮ ಆವಾಸ ಸ್ಥಾನ ಸೃಷ್ಟಿಸಿಕೊಂಡಿದ್ದವು. ಮನುಷ್ಯ ತನ್ನ ಮೇರೆ ವಿಸ್ತರಿಸುತ್ತ ಕಾಡುಗಳನ್ನು ನಾಡಾಗಿಸುತ್ತಾ ಸಾಗುತ್ತಿರುವ ಈ ಸಂದರ್ಭದಲ್ಲಿ ರಾಬಿನ್ ಹಕ್ಕಿಗಳನ್ನು ಈಗ ಎಲ್ಲೆಡೆ ಕಾಣಬಹುದು. ಮತ್ತು ಇದೇ ಕಾರಣದಿಂದ ಈ ಪುಟಾಣಿ ಹಕ್ಕಿಗೆ ಹಲವು ಶತ್ರುಗಳೂ ಹುಟ್ಟಿಕೊಂಡವು. ವಿಶೇಷವಾಗಿ ಯೂರೋಪಿನ ತೀಕ್ಷ್ಣ ಚಳಿ ಮತ್ತು ಆ ಸಮಯದಲ್ಲಿ ನಗರ ಪ್ರದೇಶಗಳಲ್ಲಿ ಸರಿಯಾಗಿ ಆಹಾರ, ಆವಾಸ ದೊರಕದ ಕಾರಣ, ಬಹಳಷ್ಟು ರಾಬಿನ್ ಹಕ್ಕಿಗಳು ತಮ್ಮ ಮೊದಲ ಕೆಲ ತಿಂಗಳಲ್ಲೇ ಸಾವನ್ನಪ್ಪುತ್ತವೆ.

ನೋಡಲು ಚಂದವಿರುವುದಷ್ಟೇ ಇವುಗಳ ಹಿರಿಮೆಯಲ್ಲ! ರಾಬಿನ್ ಹಕ್ಕಿಗಳು ಋತುಮಾನದ ಹಂಗಿಲ್ಲದೆ ವರ್ಷವಿಡೀ, ದಿನಪೂರ್ತಿ ಹಾಡುತ್ತಿರುತ್ತವೆ. ತಮ್ಮ ಗಾಯನದಿಂದಲೇ ಸ್ಪಷ್ಟವಾದ ಗಡಿಯನ್ನು ಸೃಷ್ಟಿಕೊಳ್ಳುತ್ತವೆ. ತುಂಬ ಸುಲಭವಾಗಿ ಕಾಣಸಿಗುತ್ತವೆ, ಅಕ್ಕಪಕ್ಕವೇ ಓಡಾಡುತ್ತವೆ, ಗೋಲವಾದ ಮೈಕಟ್ಟು ತುಂಟ ಕಣ್ಣುಗಳು, ಸದಾ ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ಕಣ್ಣೆದುರೇ ಕುಣಿಯುವ ಇವನ್ನು ನೋಡಿದರೆ ಮುದ್ದು ಉಕ್ಕುತ್ತದೆ. ಆದರೆ ಇವುಗಳನ್ನು ಮುಟ್ಟುವುದು ಸುಲಭದ ಮಾತಲ್ಲ.

ಈ ಪುಟ್ಟ ಜೀವಗಳ ಸುತ್ತ ಹಲವಾರು ನಂಬಿಕೆ, ಕಥೆ, ಐತಿಹ್ಯಗಳಿವೆ. ತೀರಿಹೋದ ನಮ್ಮ ಹಿರಿಯರು, ಆತ್ಮೀಯರು, ನಮ್ಮನ್ನು ನೋಡಬೇಕೆನಿಸಿದರೆ ರಾಬಿನ್ ಹಕ್ಕಿಯ ರೂಪದಲ್ಲಿ ಬಂದು ನಮ್ಮನ್ನು ಆಶೀರ್ವದಿಸುತ್ತಾರೆ ಎಂಬುದು ಐರಿಷ್ ಜನಪದ ನಂಬಿಕೆ. ತೀರಾ ದುಗುಡ ಮತ್ತು ಚಿಂತೆ ಆವರಿಸಿರುವ ಗಳಿಗೆಯಲ್ಲಿ ರಾಬಿನ್ ಹಕ್ಕಿ ಕಂಡರೆ ಅಥವಾ ಅದರ ಗಾಯನ ಕೇಳಿದರೆ, ಅದು ಆಶಾವಾದ ಮತ್ತು ಧೈರ್ಯವನ್ನು ತುಂಬಲು ನಿಸರ್ಗ ಕಳುಹಿಸುವ ಸಂದೇಶ ಎಂಬ ಮಾತನ್ನೂ ಸ್ಥಳೀಯರು ಹೇಳುತ್ತಾರೆ.

ಇನ್ನೊಂದು ನಂಬಿಕೆ ಇರುವುದು ಈ ಹಕ್ಕಿಯ ಬಣ್ಣದ ಕುರಿತು. ಏಸು ಕ್ರಿಸ್ತರನ್ನು ಶಿಲುಬೆಗೆ ಏರಿಸಿ ಅವರ ತಲೆಯ ಸುತ್ತ ಮುಳ್ಳಿನ ಕಿರೀಟ ಹಾಕಿರುತ್ತಾರೆ, ಆಗ ಇದೇ ರಾಬಿನ್ ಹಕ್ಕಿ, ಕ್ರಿಸ್ತರ ತಲೆಯ ಮೇಲಿನ ಆ ಮುಳ್ಳಿನ ಕಿರೀಟವನ್ನು ತನ್ನ ಪುಟ್ಟ ಕೊಕ್ಕಿನಿಂದ ತೆಗೆಯಲು ಪ್ರಯತ್ನಿಸುತ್ತದೆ, ಆ ಸಂದರ್ಭದಲ್ಲಿ ಹಕ್ಕಿಯ ದೇಹಕ್ಕೆ ಒಂದು



ತೊಟ್ಟು ರಕ್ತ ಅಂಟುತ್ತದೆ. ಆ ದಿನದಿಂದ ಆ ಹಕ್ಕಿಯ ಎದೆಯ ಬಳಿ ಕೆಂಪು/ ಕೇಸರಿ ಬಣ್ಣದ ಕಲೆ ಉಳಿದುಹೋಗುತ್ತದೆ. ಇದು ಮನುಷ್ಯ ಕುಲಕ್ಕೆ ತ್ಯಾಗ, ಅನುಕಂಪ ಮತ್ತು ಪರೋಪಕಾರದ ಪಾಠ ಹೇಳಿಕೊಡುತ್ತದೆ ಎಂಬುದು ಇಲ್ಲಿನ ಜನಜನಿತ ಐತಿಹ್ಯ.

ರಾಬಿನ್ ಹಕ್ಕಿಯ ಎದೆಯ ಭಾಗದಲ್ಲಿರುವ ಈ ಕೆಂಪಿನ ಬಣ್ಣ ಹೇಗೆ ಬಂತು ಎಂದು ಹೇಳುವ ಇನ್ನೊಂದು ಜನಪದ ಕತೆ ಇಂತಿದೆ; ಅದೆಷ್ಟೋ ಸಾವಿರ ವರ್ಷಗಳ ಹಿಂದೆ ಒಂದು ಕೆಟ್ಟ ಚಳಿಗಾಲದಲ್ಲಿ, ಹಿಮಪಾತವಾಗಿ ಪಕ್ಷಿಗಳು, ಇತರ ಕ್ರಿಮಿಕೀಟಗಳು ತಮ್ಮ ಉಸಿರು ಉಳಿಸಿಕೊಳ್ಳಲು, ಕೊರೆಯುವ ಚಳಿಯಿಂದ ತಮ್ಮ ಮರಿಗಳನ್ನು ರಕ್ಷಿಸಿಕೊಳ್ಳಲು ಕಷ್ಟಪಡುತ್ತಿದ್ದವು. ಈ ಸಂದರ್ಭದಲ್ಲಿ ಅದೆಲ್ಲೋ ದೂರದ ಕಣಿವೆಯಲ್ಲಿ ದೇವದೂತರ ಕಾವಲಿನಲ್ಲಿ ಅಗ್ನಿ ಇರುವುದು ಅಲ್ಲಿನ ಹಕ್ಕಿಗಳ ಅರಿವಿಗೆ ಬರುತ್ತದೆ. ಆದರೆ ಯಾರೊಬ್ಬರೂ ಅದನ್ನು ತಲುಪುವ ಕುರಿತು ಆಲೋಚಿಸುವುದಿಲ್ಲ, ಕಾರಣ ರಣ ಚಳಿ. ಗಾತ್ರದಲ್ಲಿ ಚಿಕ್ಕದು, ಯಾವುದೇ ಆಕರ್ಷಕ ರೂಪ ವಿಶೇಷತೆಗಳೇ ಇಲ್ಲದ ಒಂದು ಕಂದು ಬಣ್ಣದ ಹಕ್ಕಿ ಸಹಜೀವಿಗಳ ಕಷ್ಟ ನೋಡಲಾಗದೆ ಆ ಬೆಂಕಿಯನ್ನು ಹುಡುಕಿಕೊಂಡು ಹಿಮಗಾಳಿಯ ನಡುವೆಯೇ ತನ್ನ ಪುಟ್ಟ ರೆಕ್ಕೆಗಳನ್ನು ಬಡಿಯುತ್ತ ಸಾಗುತ್ತದೆ. ವಿವಿಧ ಸವಾಲುಗಳ ನಂತರ ಕಣಿವೆಯಿಂದ ಅದರ ಪುಟ್ಟ ಕೊಕ್ಕಿಗೆ ಸಿಗುವಷ್ಟು ಬೆಂಕಿಯನ್ನು ತರುವಲ್ಲಿ ಯಶಸ್ವಿಯಾಗುತ್ತದೆ. ಆ ಪಯಣದಲ್ಲಿ ಕೊಕ್ಕಿನಲ್ಲಿರುವ ಬೆಂಕಿ ಮೆತ್ತಗೆ ಅದರ ಎದೆಯ ಭಾಗವನ್ನು ಸುಡುತ್ತದೆ. ಮತ್ತು ಆ ಸಾಧಾರಣ ರೂಪಿನ ಹಕ್ಕಿಯ ಎದೆಗೆ ವಿಶೇಷ ಎಂಬಂಥ ಕೆಂಪನೆಯ ಹಚ್ಚೆ ಗುರುತು ಕೊಡುತ್ತದೆ. ಇಲ್ಲಿಯೂ ರಾಬಿನ್ ಹಕ್ಕಿಯು ಪರೋಪಕಾರ, ಧೈರ್ಯ, ದೃಢ ಸಂಕಲ್ಪದಂಥ ಜೀವನ ಮೌಲ್ಯಗಳನ್ನು ಸಾರುತ್ತದೆ. ಅದಕ್ಕೆಂದೇ ಇರಬೇಕು,

ಚಳಿಗಾಲ ಕಟುವಾಗಿರುವ ಡಿಸೆಂಬರ್ ತಿಂಗಳ 21ನೇ ತಾರೀಕಿನಂದು ಯುಕೆಯಲ್ಲಿ 'ರಾಷ್ಟ್ರೀಯ ರಾಬಿನ್ ಡೇ' ಆಚರಿಸಲಾಗುತ್ತದೆ.

ಕೆಲ್ಟಿಕ್ ಸಂಸ್ಕೃತಿಯಲ್ಲಿ ಯಾವುದೇ ಕೆಲಸಕ್ಕೆ ಹೊರಡುವಾಗ ಎದುರಿಗೆ ರಾಬಿನ್ ಹಕ್ಕಿಗಳು ಕಂಡರೆ ಶುಭ ಎಂದು ನಂಬುತ್ತಾರೆ. ಅದೇ ರಾಬಿನ್ ಮನೆಯೊಳಗೆ ಬಂದರೆ ಮರಣವಾರ್ತೆ ಕೇಳುವ ಭಯ ಹುಟ್ಟುತ್ತದೆಯಂತೆ. ಗಿಡ ಗಂಟಿ ಮರಗಳ ನಡುವೆ ಇರುವ ರಾಬಿನ್ ಗೂಡು ಅಥವಾ ಮೊಟ್ಟೆಗಳಿಗೆ ಹಾನಿ ಮಾಡಿದ್ದಲ್ಲಿ ಚಿಕಿತ್ಸೆ ಇಲ್ಲದ ದೀರ್ಘಕಾಲಿಕ ರೋಗಗಳು ಬರುತ್ತವೆ ಎಂಬ ನಂಬಿಕೆಯಿದೆ. ಇದೇ ಹಿನ್ನೆಲೆಯಲ್ಲಿ ಹುಷಾರು ತಪ್ಪಿದವರಿಗೆ, ಪುಟ್ಟ ಮಗುವನ್ನು ನೋಡಲು ಹೋದಾಗ ರಾಬಿನ್ ಹಕ್ಕಿಯ ಚಿತ್ರ ಇರುವ ಕಾರ್ಡ್ ಅಥವಾ ಕಸೂತಿ ಹೆಣೆದ ಕರವಸ್ತ್ರಗಳನ್ನು, ರಾಬಿನ್ ಪ್ರತಿಕೃತಿಗಳನ್ನು ಉಡುಗೊರೆಯಾಗಿ ನೀಡಲಾಗುತ್ತದೆ.

ಇಷ್ಟೆಲ್ಲಾ ಕಥೆಯನ್ನು ತನ್ನೊಳಗೆ ಪುಟ್ಟ ಹಕ್ಕಿಯೊಂದು ಬಚ್ಚಿಟ್ಟುಕೊಂಡು ತನ್ನಷ್ಟಕ್ಕೆ ತಾನಿದ್ದರೆ, ಇತ್ತ ಕವಿ, ಕಾದಂಬರಿಕಾರರು ರಾಬಿನ್ ಬಗ್ಗೆ ಬರೆಯದೆ ಬಿಟ್ಟಾರೆಯೇ? ಶೇಕ್ಸ್‌ಪಿಯರ್ ಎರಡು ನಾಟಕಗಳಲ್ಲಿ, ಸಿ.ಎಸ್. ಲೂಯಿಸ್ ಅವರ ಜಗತ್ಪ್ರಸಿದ್ಧ 'ಕ್ರೋನಿಕಲ್ಸ್ ಆಫ್ ನಾರ್ನಿಯ'ದಲ್ಲಿ ರಾಬಿನ್ ಹಕ್ಕಿಯ ಪಾತ್ರವಿದೆ. ವಿಲಿಯಮ್ ಬ್ಲೇಕ್, ಥಾಮಸ್ ಹಾರ್ಡಿ ಇನ್ನಿತರ ಪ್ರಸಿದ್ಧ ಇಂಗ್ಲಿಷ್, ಐರಿಶ್ ಕವಿಗಳಿಗೆ ರಾಬಿನ್ ಹಕ್ಕಿ ಸ್ಫೂರ್ತಿ.

ಈ ನಾಡಿನಲ್ಲಿ ದಿನಗಳು ಕಳೆಯುತ್ತಾ ನನಗೂ ಸ್ನೇಹಿತರಾದರು, ಹೊಸ ಬಾಂಧವ್ಯಗಳು ಬೆಳೆದವು. ಈ ದೇಶದ ಆಗುಹೋಗುಗಳನ್ನು, ನಿಸರ್ಗದ ಚೆಲುವನ್ನು, ಹೂವಿನ ಬಣ್ಣಗಳನ್ನು, ಬಾನಿನ ಸೊಬಗನ್ನು, ನನ್ನ ತಾಯ್ನಾಡಿನ ವಿಷಯಗಳೊಂದಿಗೆ ಹೋಲಿಕೆ ಮಾಡುತ್ತ, ಸಾಮ್ಯತೆ ಹುಡುಕುತ್ತಿದ್ದರೆ ಅದೆಂಥದೋ ಖುಷಿ. ನಾನಿಲ್ಲಿ ಬಂದು 16 ವರ್ಷ ಕಳೆದರೂ ಈ ಪುಟ್ಟ ರಾಬಿನ್ ಹಕ್ಕಿ ಮಾತ್ರ ನನ್ನ ಮನಸಿಗೆ ಇವತ್ತಿಗೂ ಆಪ್ತ. ಇಷ್ಟೆಲ್ಲಾ ಕತೆ, ನಂಬಿಕೆ, ಐತಿಹ್ಯಗಳೊಂದಿಗೆ ಗುರುತಿಸಿಕೊಳ್ಳುವ ಈ ಹಕ್ಕಿ ನನಗಂತೂ ಯಾವ ಡೌಲು, ಧಿಮಾಕು ಮಾಡದ ನಿಗರ್ವಿ, ಸ್ಥಿತಪ್ರಜ್ಞ ಸೆಲೆಬ್ರಿಟಿಯಂತೆ ಕಾಣಿಸುತ್ತದೆ.

ಈ ಪುಟ್ಟ ಹಕ್ಕಿ, ಸಾಗರ ದಾಟಿ ವಲಸೆ ಬಂದ ನನಗೆ ಹೊಸ ವಾತಾವರಣದಲ್ಲಿ ಸಮಾಧಾನವಾಗಿ ನೆಲೆಯೂರಲು ಸಹಾಯ ಮಾಡಿದ ನಿಸರ್ಗ ಕಳಿಸಿದ ಆತ್ಮೀಯ ಬಂಧು ಎಂಬುದೇ ನನ್ನ ನಂಬಿಕೆ. ■

